ಅಧ್ಯಕ್ಷರು:– ಪಕ್ಷಾತೀತವಾಗಿ ಯಾವುದಾದರೊಂದು ವಿಷಯವನ್ನು ನಾವು ನೀವು ಪ್ರತಿಪಾದನೆ ಮಾಡೋಣ. ಹೋಗುತ್ತಲೆ ರೈಲು ಡೀ–ರೈಲು ಆಗುವುದು ಬೇಡ. ಏತಕ್ಕೆ ಎಂದರೆ ನೀವು ಹೇಳತಕ್ಕದ್ದು ಬಹಳ ಗಹನವಾದ ವಿಷಯವಾಗಿದೆ. ರೈಲ್ವೆ ಬಜೆಟ್ ಫೆಬ್ರವರಿಯಲ್ಲಿ ಬರುತ್ತದೆ, ಹಾಗೆಯೇ ಜನರಲ್‌ಬಜೆಟ್ ಬರುತ್ತದೆ. ಆದ್ದರಿಂದ ನಾನು ತಮಗೆ ಸೂಚನೆ ಮಾಡುವುದೇನೆಂದರೆ, ಪಕ್ಷಾತೀತವಾಗಿ ಈ ಪ್ರಶ್ನೆಯನ್ನು ನಾವು ನೀವು ಯೋಚನೆ ಮಾಡಬೇಕಾಗಿದೆ. ಅದಕ್ಕೋಸ್ಕರವಾಗಿ ತಾವು, ವಿರೋಧಪಕ್ಷದ ನಾಯಕರು ಸಭಾನಾಯಕರು ಮತ್ತು ಇತರ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿ ನಾಳೆ ಈ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ವಾಟಾಳ್ ನಾಗರಾಜ್:– ಕೇಂದ್ರದವರು ಮೊದಲಿನಿಂದಲೂ ನಮ್ಮನ್ನು ಮಲತಾಯಿ ಧೋರಣೆಯಿಂದ ನೋಡುತ್ತಿದಾರೆ, ರೈಲ್ವೆ ವಿಷಯದಲ್ಲಾಗಲಿ, ಮಹಾಜನ್ ಕಮಿಷನ್ ವರದಿ ವಿಚಾರದಲ್ಲಾಗಲಿ, ವಿಜಯನಗರ–ಉಕ್ಕು ಕಾರ್ಖಾನೆಯ ವಿಷಯದಲ್ಲಾಗಲಿ, ಈ ರೀತಿ ನಡೆಯುತ್ತಿದ್ದಾರೆ. ಕಾವೇರಿ ಪ್ರಶ್ನೆ ಬಂದಾಗಲೂ ಸಹಾ ಇದೇ ರೀತಿ ನಡೆದಿದೆ. ಕೇಂದ್ರಸರ್ಕಾರದವರ ಧೋರಣೆ ಸರಿಯಲ್ಲ. ಆದುದರಿಂದ ಆ ಧೋರಣೆಯನ್ನು ವಿರೋಧಿಸಬೇಕಾಗಿದೆ. ಈ ಬಗ್ಗೆ ನಾವು ಮಾತನಾಡಬೇಕಾಗಿದೆ. ತಮಗೊತ್ತಿರುವ ಹಾಗೆ ಮೊದಲಿನಿಂದಲೂ ರೈಲ್ವೆನಲ್ಲಿ ಕೇರಳಕ್ಕೆ ಅನುಕೂಲವಾಗಿದೆ, ತಮಿಳುನಾಡಿಗೆ ಅನುಕೂಲವಾಗಿದೆ, ಆಂಧ್ರಕ್ಕೆ ಅನುಕೂಲವಾಗಿದೆ. ಆದರೆ ನಮಗೇನೂ ಅನುಕೂಲವಾಗಿಲ್ಲ.

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರ ಜೊತೆ ಮಾತನಾಡಿ ನಂತರ ನಾಳೆ ವಿಚಾರ ಮಾಡೋಣ. ಈಗ ಸಭಾ ನಾಯಕರು ಇಲ್ಲ. ಆದ್ದರಿಂದ ಅವರ ಜೊತೆ ಮಾತನಾಡಿ ನಾಳೆ ಪ್ರಸ್ತಾಪ ಮಾಡಿ, ಈ ಮಧ್ಯೆ ನಿಮಗೆ 24 ಗಂಟೆ ಅವಕಾಶ ಇದೆ. 24 ಗಂಟೆಗಳನ್ನು ತಾವು ಉಪಯೋಗಿಸಿಕೊಂಡು ಇತರರೊಡನೆ ಮಾತನಾಡಿ ಅನಂತರ ಒಮ್ಮತದಿಂದ ಯಾವುದಾದರೂ ಪ್ರಶ್ನೆ ಇದ್ದರೆ ತೆಗೆದುಕೊಂಡು ಬನ್ನಿ.

ಶ್ರೀ ವಾಟಾಳ್ ನಾಗರಾಜ್:– ಒಮ್ಮತಕ್ಕೆ ಬರಬೇಕು ಶ್ರೀ ದೇಶಪಾಂಡೆರವರೇ ನಿಮ್ಮ ನಿರ್ಧಾರ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ. ಆ ವಿಷಯ ಬಹಳ ಮಹತ್ವದ್ದಾಗಿದೆ. ಆದರ ಬಗ್ಗೆ ಚರ್ಚೆ ಆಗಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೇಂದ್ರ ಸರ್ಕಾರ ಹಲವಾರು ಯೋಜನೆಗಳ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದ್ದಾರೆ. ಕಾವೇರಿ ವಿಷಯವಾಗಿರಬಹುದು, ಅಥವಾ ರೈಲ್ವೆ ವಿಷಯವಾಗಿರಬಹುದು. ಹಾಗೆಯೇ ನೆರೆಹಾವಳಿಗೆ ಸರ್ಕಾರ ಪರಿಹಾರ ನೀಡುವುದರ ವಿಚಾರ ಇರಬಹುದು. ಇದು ಬಹಳ ಮಹತ್ವವಾದ ವಿಷಯ ಈ ವಿಷಯದ ಬಗ್ಗೆ ಚರ್ಚೆ ಆಗಬೇಕು ಇದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಏನಂತಿ ಮಾಡಿಕೊಳ್ಳುತ್ತೇನೆ.

2) ಶಿವಮೊಗ್ಗ–ಮಲೆನಾಡು ಎಕ್ಸ್‌ಪ್ರೆಸ್‌ನ ನಿಲುಗಡೆಯಿಂದಾದ ತೊಂದರೆ

ಶ್ರೀ ಬಿ.ಎಸ್. ಯಡಿಯೂರಪ್ಪ:– ಶಿವಮೊಗ್ಗ–ಮಲೆನಾಡು ಎಕ್ಸ್‌ಪ್ರೆಸ್‌ನ್ನು 2–3 ತಿಂಗಳಲ್ಲಿ ನಿಲ್ಲಿಸಿಬಿಡುತ್ತಾರೆ ಇದರ ಪರಿಣಾಮ ಏನು ಎಂಬುದನ್ನು ಯೋಚನೆ ಮಾಡಬೇಕು. ಅನೇಕ ವರ್ಷಗಳಿಂದ ಇರತಕ್ಕ ಸೌಲಭ್ಯವನ್ನು ನಿಲ್ಲಿಸಿಬಿಡುತ್ತಾರೆ. ಅನೇಕ ವರ್ಷಗಳಿಂದ ನಮ್ಮ ಶಿವಮೊಗ್ಗ ಜಿಲ್ಲೆಗೆ ಸಾಕಷ್ಟು ಸವಲತ್ತುಗಳು ಸಿಗುತ್ತಿಲ್ಲ. ಶ್ರೀ ದೇಶಪಾಂಡೆಯವರು ಹೇಳಿದಹಾಗೆ, ರೈಲ್ವೆ ಇಲಾಖೆ ನಮ್ಮ ರಾಜ್ಯಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆ ಎಂದು ಎಲ್ಲರಿಗೂ ಗೊತ್ತು. ಇದರ ಬಗ್ಗೆ ವಿಶೇಷವಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಚಾಮರಾಜನಗರ - ಮೆಟ್ಟು ಪಾಳ್ಯಂ ಬ್ರಾಡ್‌ಗೇಜ್ 15 ವರ್ಷಗಳಿಂದ ಆಗಿಲ್ಲ: ಯಲಹಂಕ - ಬಂಗಾರುಪೇಟೆ ನಡುವೆ ಇರುವ ಸಣ್ಣ ರೈಲನ್ನು ಬ್ರಾಡ್‌ಗೇಜ್ ಆಗಿ ಪರಿವರ್ತನೆ ಮಾಡುವ ಕೆಲಸ ಆಗಿಲ್ಲ. ವರ್ತುಲ ರೈಲ್ವೆ ಕೆಲಸ ಬೆಂಗಳೂರು ನಗರದಲ್ಲಿ ಪ್ರಾರಂಭವಾಗಿಲ್ಲ ಈ ರೀತಿ ಹಲವಾರು ಕೆಲಸಗಳು ಆಗಿಲ್ಲ. ರೈಲ್ವೆ ಇಲಾಖೆಯಿಂದ ನಿಜವಾಗಿ ನಮಗೆ ಅನ್ಯಾಯವಾಗುತ್ತಾ ಇದೆ.

ಕೇಂದ್ರದ ಮಲತಾಯಿ ಧೋರಣೆಯನ್ನು ನಾನು ವಿರೋಧಿಸಿ ಪ್ರತಿಭಟನೆ ಮಾಡುತ್ತಿದ್ದೇನೆ. ಅದು ಅತ್ಯಂತ ಪ್ರಮುಖವಾದ ವಿಚಾರ. ಕೇಂದ್ರ ಸರ್ಕಾರ ಕರ್ನಾಟಕವನ್ನು ಕಡೆಗಣಿಸಿ ಕರ್ನಾಟಕವನ್ನು ಕೊನೆಯ ಭಾಗವಾಗಿ ಕಂಡಿದ್ದಾರೆ. ಆದುದರಿಂದ ನಾನು ಕಪ್ಪು ಬಾವುಟದ ಪ್ರದರ್ಶನವನ್ನು ಈ ಸದನದಲ್ಲಿ ಮಾಡಲೇಬೇಕಾಗುತ್ತದೆ. ತಾವು ತಪ್ಪು ತಿಳಿದುಕೊಳ್ಳಬಾರದು. ಇದರಿಂದ ನಮಗೆ ಬಹಳ ನೋವಾಗಿದೆ.

ಅಧ್ಯಕ್ಷರು:-ನಿಮಗೆ ನೋವಾಗಿದೆ ಎಂದು ಸದನಕ್ಕೂ ಆರ್ಥವಾಗಿದೆ, ನಮಗೂ ಆರ್ಥವಾಗಿದೆ. ಸಭೆಯ ಒಟ್ಟಾರೆ ಅಭಿಪ್ರಾಯ ಬಂದರೆ ನಿಮ್ಮ ನೋವಿಗೆ ಸ್ವಲ್ಪವಾದರೂ ಸಾಂತ್ವನ ಸಿಕ್ಕುತ್ತದೆ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:-ಈ ವಿಚಾರದಲ್ಲಿ ತಮ್ಮ ವಿರುದ್ಧವೂ ಅಲ್ಲ, ಯಾರ ವಿರುದ್ಧವೂ ಅಲ್ಲ. ಕೇಂದ್ರ ಸರ್ಕಾರ ಮೊದಲಿನಿಂದಲೂ ಮಲತಾಯಿ ಧೋರಣೆ ತೋರುತ್ತಿದೆ. ನಾನು ಇದನ್ನು ಸುಮ್ಮನೆ ಬಿಟ್ಟುಕೊಂಡು ಹೋಗುತ್ತಿದ್ದರೆ ಆಗುವುದಿಲ್ಲ. ಆದಕ್ಕೋಸ್ಕರ ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯನ್ನು ಈ ಸದನದ ಮೂಲಕ ಖಂಡಿಸುತ್ತೇನೆ. ಒಂದೇ ಸಮನೆ ಕನ್ನಡಿಗರನ್ನು, ಕರ್ನಾಟಕದವರನ್ನು ಕಡೆಗಣಿಸಿ ಕಾಲ ಕಸದ ರೀತಿಯಲ್ಲಿ ಕಾಣುತ್ತಾ ಇದ್ದಾರೆ. ಈ ಬಗ್ಗೆ ನಾನು ನನ್ನ ಪ್ರತಿಭಟನೆಯನ್ನು ಕಪ್ಪು ಬಾವುಟದ ಪ್ರದರ್ಶನ ಮಾಡುವುದರ ಮೂಲಕ ಸಭಾತ್ಯಾಗ ಮಾಡುತ್ತಿದ್ದೇನೆ. ಅದು ಬಹಳ ಅನ್ಯಾಯ. ಮೊದಲಿನಿಂದಲೂ ಅನ್ಯಾಯ ನಡೆಯುತ್ತಿದೆ. ಹೀಗಾಗಬಾರದು., ಕೇಂದ್ರ ಸರ್ಕಾರದ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಇದು ಒಂದೇ ಸಮನೆ ನಡೆಯುತ್ತಾ ಇದೆ. ನಮ್ಮ ಪಾರ್ಲಿಮೆಂಟಿನ ಸದಸ್ಯರಿಗೆ ಹೇಳಿದ್ದೇನೆ. ಇದರ ಬಗ್ಗೆ ಒಬ್ಬರೂ ಚಿತ್ತಾರ ಎತ್ತುವುದಿಲ್ಲ ಎಂದು ಹೇಳಿದರೆ ನಾವು ಎಲ್ಲಿ ಹೇಳಬೇಕು ಈ ಧ್ವನಿಯನ್ನು? ನಮ್ಮವರೆ ರೈಲ್ವೆ ಮಂತ್ರಿಗಳಾಗಿದ್ದಾರೆ. ನಮ್ಮವರೇ ಅಲ್ಲಿ ಮೊದಲಿನಿಂದಲೂ ಇದ್ದಾರೆ. ಹನುಮಂತಯ್ಯನವರು, ದಾಸಪ್ಪನವರು, ಟಿ.ಎ. ಪೈಯವರು ನಮ್ಮ ಅನೇಕ ಜನ ಅಲ್ಲಿದ್ದರೂ ಒಂದು ಅಂಗುಲ ರೈಲ್ವೆಲೈನನ್ನು ಇವತ್ತು ನಮಗೆ ಪಡೆಯುವುದಕ್ಕೆ ಆಗುತ್ತಾ ಇಲ್ಲ. ಈ ಒಂದು ದೃಷ್ಟಿಯಿಂದ ನನಗೆ ಬಹಳ ನೋವಾಗಿದೆ. ಕೇಂದ್ರದ ಮಲತಾಯಿ ಧೋರಣೆಯನ್ನು ಧಿಕ್ಕರಿಸಿ ಕೇಂದ್ರದ ವಿರುದ್ಧ ಕಪ್ಪು ಬಾವುಟದ ಪ್ರದರ್ಶನವನ್ನು ಸಭೆಯ ಮೂಲಕ ಮಾಡಿ ಸಭಾತ್ಯಾಗ ಮಾಡುತ್ತಾ ಇದ್ದೇನೆ. ಕೇಂದ್ರದ ನೀತಿ ವಿರುದ್ಧ ನನ್ನ ಪ್ರತಿಭಟನೆ ಇದ್ದೇ ಇದೆ. ಯಾವಾಗಲೂ ಇದೆ. ಮುಂದೆಯೂ ಇದೆ. ಈ ವಿಚಾರದಲ್ಲಿ ಮಾತ್ರ ರಾಜಿ ಆಗುವುದಕ್ಕೆ ತಯಾರು ಇಲ್ಲ. ತಮಗೆ ಗೊತ್ತಿದೆ. ಈ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಈ ಹೋರಾಟಗಳು ನಿಮಗೆ ಗೊತ್ತೇ ಇದೆ. ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಾ ಇದೆ.

ಶ್ರೀ ವಾಟಾಳ್ ನಾಗರಾಜ್ ಅವರು ಕಪ್ಪು ಬಾವುಟ ಪ್ರದರ್ಶಿಸುತ್ತಾ ಸಭಾತ್ಯಾಗ ಮಾಡಿದರು.

ವರದಿಯನ್ನೊಪ್ಪಿಸುವುದು

ಶ್ರೀ ಜಿ. ರಾಮಕೃಷ್ಣ: ಮೈಸೂರು ಪೆಯಿಂಟ್ಸ್ ಮತ್ತು ವಾರ್ನಿಶ್ ನಿಯಮಿತ ಮೈಸೂರು, ಮೇಲಿನ ಸಾರ್ವಜನಿಕ ಉದ್ದಿಮೆಗಳ (8ನೆಯ ವಿಧಾನ ಸಭೆ) ಸಮಿತಿಯ 32ನೇ